



ಬೆಳಗಾವಿಯಿಂದ 70 ಕಿ.ಮೀ ದೂರದಲ್ಲಿರುವ ಕವಲೆಸಾತ್‌ನ ರಮ್ಯ ನೋಟ ಚಿತ್ರ: ಸಂತೋಷ ಈ. ಚಿನಗುಡಿ

## ಖಾನಾಪುರಕ್ಕೂ ಬರ್‍ರಿ...

ಸಹ್ಯಾದ್ರಿ ಶ್ರೇಣಿಯ ಅರಣ್ಯದಲ್ಲಿ ಹುಟ್ಟಿಕೊಂಡ ಊರು ಖಾನಾಪುರ. ಬೆಟ್ಟಗುಡ್ಡಗಳ ಸಾಲು, ಮಲಪ್ರಭೆ ಹಾಗೂ ಮಹದಾಯಿ ನದಿಗಳ ನೀರು ಇಲ್ಲಿ ಹಲವು ಜಲಪಾತಗಳಿಗೆ ಜನ್ಮ ನೀಡಿವೆ. ಈ ಊರಿನ ಯಾವ ದಿಕ್ಕಿಗೆ ಹೋದರೂ ನಗೆಚೆಲ್ಲಿ ಧುಮ್ಮಿಕ್ಕುವ ಜಲಪಾತಗಳೇ ಕಾಣಸಿಗುತ್ತವೆ.

ವಜ್ರಾ ಜಲಪಾತ, ವಜ್ರಧಾರಾ, ವಜ್ರಪೋಹಾ ಜಲಪಾತಗಳು ಪ್ರಸಿದ್ಧವಾದವು. ಈ ಜಲಪಾತದ ನೀರಿನ ಜತೆಗೆ ವಜ್ರ ಹೋಲುವ ಸಣ್ಣ ಹರಳುಗಳು ಹರಿದುಬರುವ ಕಾರಣ ಇವುಗಳಿಗೆ ಅದೇ ಹೆಸರು ಇಡಲಾಗಿದೆ. ಚಿಗಳೆ ಜಲಪಾತ, ಭಟವಾಡಾ, ಲಾಕಡಿ, ತಾಮಡಾ, ಅಸೋಗಾ, ಚೋರ್ಲಾ, ಮಾನ ಜಲಪಾತಗಳೂ ನಯನ ಮನೋಹರವಾಗಿವೆ.

ಇನ್ನೂ ಹಲವು ಜಲಪಾತಗಳು ಭೀಮಗಡ ಅಭಯಾರಣ್ಯದಲ್ಲಿ ಅಡಗಿವೆ. ಅಲ್ಲಿಗೆ ಪ್ರವೇಶವಿಲ್ಲದ ಕಾರಣ ಚಿತ್ರದಲ್ಲಿ ಮಾತ್ರ ನೋಡಬಹುದು. ಬೆಳಗಾವಿಯಿಂದ 25 ಕಿ.ಮೀ. ದೂರದಲ್ಲಿರುವ ಖಾನಾಪುರಕ್ಕೆ ಬಂದರೆ; ಜಲಪಾತಗಳ ಜತೆಗೆ ಹಲವು ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಬಹುದು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಅಡಗುದಾಣ, ಗಲ್ಲಿಗೇರಿಸಿದ ಮರ, ಮಣ್ಣು ಮಾಡಿದ ಸ್ಥಳ, ಕಣಕುಂಬಿ, ಹಂಡಿಬಡಗನಾಥ ಸ್ಥಳಗಳು ಅದ್ಭುತ ಅನುಭವ ನೀಡುತ್ತವೆ.

ಜಲಪಾತದ ಮೇಲೆ ಬ್ರಿಟಿಷ್ ಆಡಳಿತ ಕಾಲದಲ್ಲೇ ತೂಗುಸೇತುವೆ ನಿರ್ಮಿಸಲಾಗಿದೆ. ಇದರ ಮೇಲೆ ನಿಂತು ನೋಡುವುದೇ ರೋಮಾಂಚಕ. ಹಿಂದೆ ಸೇತುವೆ ಮೇಲೆ ಜನ, ಜಾನುವಾರು, ಬೈಕುಗಳ ಓಡಾಟವಿತ್ತು. ಅದು ಅಪಾಯಕಾರಿ ಎಂದು ಗೊತ್ತಾಗಿ ಸಂಚಾರ ನಿರ್ಬಂಧ ಮಾಡಲಾಗಿದೆ.

ನದಿ ದಂಡೆಯಲ್ಲಿರುವ ಪ್ರಾಚೀನ ಕಾಲದ ಮಹಾಲಿಂಗೇಶ್ವರ ದೇವಸ್ಥಾನ ಕೂಡ ವಾಸ್ತುಶಿಲ್ಪದ ಸೊಬಗಿನಿಂದ ಕೂಡಿದೆ. ಇತಿಹಾಸದುದ್ದಕ್ಕೂ ಈ ಜಲಪಾತದ ದೇಶದ ಆಕರ್ಷಣೆ ಆಗಿತ್ತು ಎಂಬುದನ್ನು ಈ ಅಂಶಗಳು ಬಿಂಬಿಸುತ್ತವೆ.

## ಗೊಡಚಿನಮಲ್ಕಿ ಎಂಬ ಸುಂದರ ಜಲಪಾತ

ಗೊಡಚಿನಮಲ್ಕಿ ಜಲಪಾತದವೂ ಸೌಂದರ್ಯದ ಖನಿಯಾಗಿದೆ. ಪ್ರವಾಸಿಗರನ್ನು ಬರಸೆಳೆಯುವಲ್ಲಿ ಒಂದನ್ನೊಂದು ಮೀರಿಸುವಂತಿವೆ. ದೂರದೂರದಿಂದ ಬಳುಕುತ್ತ ಬರುವ ಈ ಜಲಪಾತ ಸೃಷ್ಟಿ ಸೌಂದರ್ಯಕ್ಕೆ ಕನ್ನಡಿ. ಪ್ರಕೃತಿ ಮಾತೆಯೇ ಈ ಜಲಪಾತವನ್ನು ಕೈ ಹಿಡಿದು ಮೆಟ್ಟಿಲುಗಳ ಮೇಲಿನಿಂದ ಇಳಿಸುತ್ತಿದ್ದಾಳೇನೋ ಎನ್ನುವ ಭಾವನೆ ಇದನ್ನು ನೋಡಿದವರಲ್ಲಿ ಮೂಡುತ್ತದೆ.

ಪಶ್ಚಿಮಘಟ್ಟದಲ್ಲೇ ಹುಟ್ಟುವ ಮಾರ್ಕಂಡೇಯ ನದಿ ಇದರ ಜನನಿ. ಗೊಡಚಿನಮಲ್ಕಿ ಬಳಿ ಜಲಪಾತವಾಗಿ ಹರಿಯುವ ಈ ನದಿ ಮುಂದೆ ಬಂದು ಘಟಪ್ರಭೆಯ ಒಡಲನ್ನೇ ಸೇರುತ್ತದೆ.

## ದಾರಿ ಯಾವುದಯ್ಯ

ಬೆಳಗಾವಿಯಿಂದ ಗೋಕಾಕಗೆ (58 ಕಿ.ಮೀ.) ಬಸ್ ಸೌಕರ್ಯವಿದೆ. ಗೋಕಾಕ ರೋಡ್‌ವರೆಗೆ ರೈಲಿನಲ್ಲಿ ಪ್ರಯಾಣಿಸಬಹುದು. ಅಲ್ಲಿಂದ 6 ಕಿ.ಮೀ. ಗೋಕಾಕ ನಗರವಿದೆ. ನಗರದಿಂದ ಖಾಸಗಿ ಬಸ್ ಅಥವಾ ಆಟೊಗಳಲ್ಲಿ ಸಾಗಿ ಜಲಪಾತ ತಲುಪಬಹುದು. ಬೆಳಗಾವಿಯಿಂದ ಗೊಡಚಿನಮಲ್ಕಿ 51 ಕಿ.ಮೀ. ದೂರದಲ್ಲಿದೆ. ಈ ಎರಡೂ ಜಲಪಾತಗಳ ಮಧ್ಯೆ 16 ಕಿ.ಮೀ. ಅಂತರವಿದೆ.

ಜೂನ್‌ನಿಂದ ನವೆಂಬರ್‌ವರೆಗೆ ಜಲಪಾತಗಳು ಮೈದುಂಬಿರುತ್ತವೆ. ಗೋಕಾಕದಲ್ಲಿ ಊಟ, ಉಪಾಹಾರ, ವಸತಿ ಸೌಲಭ್ಯಕ್ಕೆ ಕೊರತೆ ಇಲ್ಲ. ಆದರೆ, ಗೊಡಚಿನಮಲ್ಕಿ ಬಳಿ ಇಂಥ ಸೌಕರ್ಯವಿಲ್ಲ. ಎರಡೂ ಕಡೆ ಅಪಾಯಕ್ಕೆ ಆಹ್ವಾನ ನೀಡುವಂಥ ಸ್ಥಳಗಳಿದ್ದು, ಅವುಗಳಿಂದ ಎಚ್ಚರವಾಗಿರುವುದು ಮುಖ್ಯ.

